18

# ನಂಬುವುದು ಎಂಬುದರ ಅರ್ಥವೇನು?

ರಕ್ಷಿಸಲ್ಪಡಲಿಕ್ಕೆ ವಿವರಣೆಯುಳ್ಳ, ಪ್ರೇರಣೆಯುಳ್ಳ ಹಾಗೂ ಅಧಿಕೃತವಾದ ಒಂದೇ ಮಾರ್ಗದ ಉದಾಹರಣೆಯು ಅಪೊಸ್ತಲರ ಕೃತ್ಯಗಳು 16:25:34ರಲ್ಲಿಯ ಫಿಲಿಪ್ಪಿಯದಲ್ಲಿ ಸೆರೆಮನೆಯ ಅಧಿಕಾರಿ ಮತ್ತು ಅವನ ಕುಟುಂಬದ ಮಾರ್ಪಡುವಿಕೆಯ ವೃತ್ತಾಂತವಾಗಿರುತ್ತದೆ. ಈ ಕಠಿಣವಾದ ಸೆರೆಮನೆಯ ಅಧಿಕಾರಿಗೆ ಹೊಡೆಯಲ್ಪಟ್ಟ ಬೆನ್ನುಗಳ ಮೇಲೆ ಬಾಸಾಳಗಳು ಏಳುವಂತೆ ಹೊಡೆಯಲ್ಪಟ್ಟ, ರಕ್ತ ಸೋರುತ್ತಿರುವ ಇಬ್ಬರು ಸೆರೆಯವರಕಡೆಗೆ ಮೃದುವಾದ ಭಾವನೆಗಳಿರಲಿಲ್ಲ. ಮಾನವತೆಯುಳ್ಳವನಾಗಿರುವುದರ ಬದಲು, ಒಂದು ಸಂಗತಿಯು ಆ ಸೆರೆ ಮನೆಯ ಅಧಿಕಾರಿಯ ಮನಸ್ಸಿನಲ್ಲಿತ್ತು: ಹೆಚ್ಚು ಭದ್ರವಾಗಿ ಕಾಯಬೇಕೆಂದು ಅವನ ಮೇಲಿನ ಅಧಿಕಾರಿಗಳು ಅವನಿಗೆ ಹೇಳಿದ್ದರು, ಅದರ ಪರಿಣಾಮವಾಗಿ ಪೌಲ ಮತ್ತು ಸೀಲರನ್ನು ಒಳಗಿನ ಸೆರೆಮನೆಯ ಕೋಣೆಯಲ್ಲಿ ಹಾಕಿದ್ದಲ್ಲದೇ, ಅವರ ಕಾಲುಗಳನ್ನು ಪಟ್ಟಿಗಳಲ್ಲಿ ಬಂದಿಸಿದ್ದನು.

ಒಂದು ಭೂಕಂಪದಿಂದ ಸೆರೆಮನೆ ಅಧಿಕಾರಿಯು ನಿದ್ರೆಯಿಂದ ಎಚ್ಚತ್ತು ಗಾಭರಿಗೊಂಡನು - ಸೆರೆಯಲ್ಲಿದ್ದವರ ಬಂಧನಗಳು ಬಿಚ್ಚಿ ಸೆರೆಮನೆಯ ಬಾಗಿಲುಗಳು ತೆರೆದು ಕೊಳ್ಳುವಷ್ಟು ಭೂಕಂಪವು ಬಲವಾಗಿತ್ತು. ಯಾರೂ ತಪ್ಪಿಸಿ ಕೊಂಡು ಹೋಗಿಲ್ಲವೆಂಬುದನ್ನು ತಿಳಿದಾಗ ಸೆರೆಮನೆಯ ಅಧಿಕಾರಿಗೆ ಅದನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ. ಫಕ್ಕನೇ, ಬಲವಾದ ಶಕ್ತಿಯು, ಲೋಕವನ್ನು ಅಧೀನತೆಯಲ್ಲಿಟ್ಟು ಕೊಂಡಾತನು, ತಾನು ಸೆರೆಮನೆಯಲ್ಲಿ ಬಂಧಿಸಿದ ಘಡಿಯೇಟು ತಿಂದ ಆ ಇಬ್ಬರೊಂದಿಗೆ ಇದ್ದಾನೆಂದು ತಿಳಿದು ಕೊಂಡನು. ತಮಗೆ ಸಂದರ್ಭದೊರೆತರೆ ತಪ್ಪಿಸಿಕೊಂಡು ಹೋಗುವ ಜನರು ಇವರಾಗಿರುವದಿಲ್ಲ, ಕಣ್ಣಿಗೆ ಕಾಣದ ಶಕ್ತಿಯು ಇತರ ಅಪರಾಧಿ ಸೆರೆಯಾಳುಗಳೂ ಓಡಿಹೋಗದಂತೆ ತಡೆಹಿಡಿದಿರುವುದು, ಹೊಡೆಯಲ್ಪಟ್ಟ ಈ ಇಬ್ಬರು ಸೆರೆಯವರ ಭಾಗವನ್ನು ಜಗತ್ತಿನ ಅತಿದೊಡ್ಡ ಶಕ್ತಿಯು ಸ್ಪಷ್ಟವಾಗಿ ತೆಗೆದುಕೊಂಡಿತ್ತು. ಭಯಗೊಂಡ ಸೆರೆಮನೆಯ ಅಧಿಕಾರಿಯು ಅದೃಶ್ಯವಾದ ಬಲವು ತನ್ನ ಪರವಾಗಿಯೂ ಇರಬೇಕೆಂದು ಬಯಸಿದನು! ತಾನು ಕಡೆಗಣಿಸಿದ್ದ ಜನರನ್ನು ಗೌರವಿಸಲು ಅವನು ಸಿದ್ಧನಾದನು. ಅವರು ಆ ಜಗತ್ತಿನ ಮಹಾದೊಡ್ಡ ಬಲದ ಪ್ರತಿನಿಧಿಗಳಾಗಿರುವರೆಂದು ಅವನು ಅರ್ಥಮಾಡಿಕೊಂಡಿದ್ದನು! ಸಂಭವಿಸಿದ್ದು ಈ ಜನರ ಮಾತುಗಳನ್ನು ತಿರಸ್ಕರಿಸಲಾಗದು ಎಂಬುದನ್ನು ಸೆರೆಮನೆಯ ಅಧಿಕಾರಿಗೆ ದೃಢಪಡಿಸಿತು. ಅವರು ಆಜ್ಞಾಪಿಸಿದ್ದೆಲ್ಲದಕ್ಕೂ ವಿಧೇಯನಾಗಲು ಅವನು ಸಿದ್ಧನಾದನು. ಭಯದಿಂದ ನಡುಗುತ್ತ, ಜಗತ್ತನ್ನು ಆಳುವಾತನಿಂದ ಮನ್ನಣೆ ಹೊಂದಿದ ಆ ಇಬ್ಬರ ಮುಂದೆ ಅವನು ಅಡ್ಡಬಿದ್ದನು. ಅನಂತರ, ಸೆರೆಮನೆಯಿಂದ ಹೊರಗೆ ಕರೆದುಕೊಂಡು ಹೋಗಿ, “ಸ್ವಾಮೀಗಳೆ, ನಾನು ರಕ್ಷಣೆ ಹೊಂದುವದಕ್ಕೆ ಏನು ಮಾಡಬೇಕು?” ಎಂದು ಕೇಳಿದನು.

ರಕ್ಷಣೆ ಹೊಂದುವದಕ್ಕೆ? ಅವನ ಅರ್ಥವೇನು? ಭೂಕಂಪದಲ್ಲಿ ಮರಣದ ಭಯದಿಂದ ಬಿಡಿಸಲ್ಪಡುವುದೋ? ಅದು ಅವನ ಮನಸ್ಸಿನಲ್ಲಿ ಇದ್ದದ್ದು ಆಗಿದ್ದರೆ, ಪೌಲನು ಅವನ ಯೋಚನೆಯನ್ನು ಕ್ರಿಸ್ತನಲ್ಲಿರುವ ಬಿಡುಗಡೆಯ ಕಡೆಗೆ ತಿರುಗಿಸಿದನು.

ಭೂಕಂಪದಿಂದ ರಕ್ಷಣೆಯನ್ನು ಯೇಸು ವಾಗ್ದಾನ ಮಾಡಿರಲಿಲ್ಲ. ಯೇಸುವಿನ ರಕ್ಷಣೆಯು ಎರಡು ವಿಧದ್ದಾಗಿದೆ: (1) ಪಾಪದ ಅಪರಾಧದಿಂದ ಬಿಡುಗಡೆ (ಮತ್ತಾಯ 26:28; ಲೂಕ 19:10; ಯೋಹಾನ 8:24; ಅಪೊಸ್ತಲರ ಕೃತ್ಯಗಳು 22:16) ಮತ್ತು (2) ನರಕದಿಂದ, "ಬರಲಿರುವ ದೈವ ಕೋಪದಿಂದ" ಬಿಡುಗಡೆ (1 ಥೆಸಲೊನೀಕ 1:10; ನೋಡಿರಿ ಮತ್ತಾಯ 25:41; ಮಾರ್ಕ 9:47, 48).

"ರಕ್ಷಣೆ ಹೊಂದುವದಕ್ಕೆ" ಎಂಬ ಮಾತಿನಲ್ಲಿ ಸೆರೆಮನೆಯ ಅಧಿಕಾರಿಯ ಕರ್ಮಣಿ ಪ್ರಯೋಗವನ್ನು ಉಪಯೋಗಿಸಿದ್ದರಲ್ಲಿ ಒಂದು ಮಹತ್ವದ ಸತ್ಯವು ವ್ಯಕ್ತಪಡಿಸಲ್ಪಟ್ಟಿದೆ. ಪಾಪಿಯು ತನ್ನನ್ನು ತಾನೇ ರಕ್ಷಿಸಿಕೊಳ್ಳಲಾರನು, ಆದರೆ ತನ್ನಿಂದ ಹೊರಗಿರುವವರ ಮೇಲೆ ಸಂಪೂರ್ಣವಾಗಿ ಅವಲಂಭಿಸಿರುತ್ತಾನೆ, ಒಬ್ಬ ಮನುಷ್ಯನು ತನ್ನ ಸ್ವಂತ ನೈತಿಕ ಕಾರ್ಯಗಳಿಂದ ತನ್ನನ್ನು ರಕ್ಷಿಸಿಕೊಂಡರೆ, ಅವನಿಗೆ ಯೇಸುವಿನ ಅಗತ್ಯತೆಯಿರುವದಿಲ್ಲ. "ನನಗಾಗಿ ಸಾಯುವದರಲ್ಲಿ ಒಳ್ಳೆಯದಾಗಲಿ ಎಂದುಕೊಂಡೆ, ಆದರೆ ನನಗೆ ಅಂಥ ತ್ಯಾಗದ ಅವಶ್ಯಕತೆಯಿರಲಿಲ್ಲ" ಎಂದು ಅವನು ಕ್ರಿಸ್ತನಿಗೆ ಹೇಳಬಹುದಾಗಿದೆ. ಸತ್ಯದಲ್ಲಿ, ಯಾವುದೇ ಮನುಷ್ಯನು ಒಂದೇ ಒಂದು ಪಾಪದ ಅಪರಾಧದಿಂದ ತನ್ನನ್ನು ಬಿಡಿಸಿಕೊಳ್ಳಲಾರನು. "ನೀನು ಕ್ಷಮಿಸಲ್ಪಟ್ಟಿದ್ದೀ" ಎಂದು ದೇವರು ಮಾತ್ರವೇ ಹೇಳ ಬಲ್ಲನು, ಆಗ ಸೆರೆಮನೆಯ ಅಧಿಕಾರಿಯು ರಕ್ಷಣೆಯು ತನ್ನನ್ನು ದಾಟಿ ಇರುವುದೆಂದು ಅರ್ಥಮಾಡಿಕೊಂಡು, ವಿಷಯವನ್ನು ದೀನತೆಯಿಂದಲೂ ಯೋಗ್ಯವಾಗಿಯೂ ಸಂಧಿಸಿದನು.

ಇನ್ನೊಂದು ಕಡೆಯಲ್ಲಿ "ಮಾಡಬೇಕು" ಎಂಬ ಪದವನ್ನು ಉಪಯೋಗಿಸಿದಾಗ, ಒಂದು ದೊಡ್ಡ ಸತ್ಯವನ್ನು ಅವನು ವ್ಯಕ್ತಪಡಿಸಿದನು. ಸಂಪೂರ್ಣತೆಯಲ್ಲಿ, ಒಬ್ಬ ಪಾಪಿಯು ತನ್ನ ರಕ್ಷಣೆಗೆ ಅರ್ಹನಾಗಲು ಏನೂ ಮಾಡಲಾರದವನಾಗಿದ್ದರೂ (ಎಫೆಸ 2:8, 9) ರಕ್ಷಕನು ತನ್ನ ಚಿತ್ತವನ್ನು "ಮಾಡುವವರನ್ನು" (ಮತ್ತಾಯ 7:21), ತನಗೆ ವಿಧೇಯ ರಾಗುವವರನ್ನು (ಇಬ್ರಿಯ 5:9) ಮಾತ್ರವೇ ರಕ್ಷಿಸುವನು (ಇಬ್ರಿಯ 5:9). ಸರಿಯಾಗಿ ತಿಳಿಸಲ್ಪಟ್ಟ ಪಾಪಿಯು ಆಜ್ಞೆಗಳನ್ನು ಕೈಕೊಳ್ಳುವದರಲ್ಲಿ ಗರ್ವಪಡುವದಿಲ್ಲ (ಲೂಕ 17:10) ಯಾವಾಗಲೂ ಅವನು ತನ್ನ ಸ್ವಂತ ಅರ್ಹತೆಯಿಂದಲ್ಲ, ಆದರೆ ಕೃಪೆಯಿಂದ ರಕ್ಷಿಸಲ್ಪಟ್ಟ ಪಾಪಿ ತಾನಾಗಿದ್ದೇನೆಂಬುದನ್ನು ತಿಳಿದಿರುತ್ತಾನೆ. ಅವನು ರಕ್ಷಣೆಯನ್ನು ಸಂಪಾದಿಸಿಕೊಳ್ಳಲಾರನು (ರೋಮಾಪುರ 4:4, 5; ಎಫೆಸ 2:8, 9).

ಸೆರೆಮನೆಯ ಅಧಿಕಾರಿಯು "ನಾನು" ಎಂಬ ಪದವನ್ನು ಉಪಯೋಗಿಸಿದ್ದು, ಇನ್ನೊಂದು ಮಹತ್ವದ ಸಂಗತಿಯನ್ನು ತೋರಿಸುತ್ತದೆ, "ನಾನು" ಎಂಬ ಸರ್ವನಾಮದ ಉಪಯೋಗವು, ರಕ್ಷಿಸಲ್ಪಡಲು ಹೇಬೆಲನು, ಇಲ್ಲವೇ ಅಬ್ರಹಾಮನು ಇಲ್ಲವೇ ಮೋಶೆಯು ಇಲ್ಲವೇ ಶಿಲುಬೆಯ ಮೇಲಿನ ಕಳ್ಳನು ಏನು ಮಾಡಿದನು ಎಂದು ಕೇಳುತ್ತಿರುವದಿಲ್ಲ ಎಂಬುದನ್ನು ಅನ್ವಯಿಸುತ್ತದೆ, "ನಾನು" ಎಂಬ ಪದವು ಒಬ್ಬನು ಹೀಗೆ ಹೇಳುತ್ತಿರುವನು ಎಂಬುದನ್ನು ಅನ್ವಯಿಸುತ್ತದೆ: "ಇಂದು ಪಾಪಿಯು ರಕ್ಷಿಸಲ್ಪಡಲು ಏನು ಮಾಡಬೇಕು ಎಂಬುದನ್ನು ತಿಳಿಯಲು ನಾನು ಬಯಸುತ್ತೇನೆ - ಪಿತೃಗಳಲ್ಲಿ ಅಲ್ಲ, ಯೆಹೂದಿಧರ್ಮದಲ್ಲಿ ಅಲ್ಲ, ಸ್ನಾನಿಕನಾದ ಯೋಹಾನನ ದಿನಗಳಲ್ಲಿ ಅಲ್ಲ, ಕ್ರಿಸ್ತನ ವೈಯಕ್ತಿಕ ಸೇವೆಯ ಸಮಯದಲ್ಲಿ ಅಲ್ಲ, ಆದರೆ ಈಗ, ನನ್ನ ಸಮಯದಲ್ಲಿ." "ನೀರು ಚಿಮುಕಿಸುವದರಲ್ಲಿ ಶಿಶುವಿನಂತೆ ನನಗಾಗಿ ನನ್ನ ಪ್ರತಿಷ್ಠಿತ ತಾಯಿಯು ಏನು ಮಾಡಿರುವಳೋ ಅದರ ಮೇಲೆ ನಾನು ಅವಲಂಭಿಸಿರುವದಿಲ್ಲ, ಇಲ್ಲವೇ ನಾನು ಸತ್ತನಂತರ ನನಗಾಗಿ ಒಬ್ಬ ಬಂಧುವು ಇಲ್ಲವೇ ಸ್ನೇಹಿತನು ಬಾಪ್ತಿಸ್ಮ ಹೊಂದುವದರಿಂದ ಇಲ್ಲವೇ ನನಗಾಗಿ ಮಾಸ್ ಹೊಂದಿಕೊಳ್ಳಲಿರುವದರ ಮೇಲೆ ನಾನು ಅವಲಂಭಿಸುವದಿಲ್ಲ. ನಾನು

ಮಾಡುವದರ ಮೇಲೆಯೇ ನಾನು ಅವಲಂಭಿಸಿರುತ್ತೇನೆ" ಎಂಬುದನ್ನು ಅಂಥ ಮಾತು ವ್ಯಕ್ತಪಡಿಸುತ್ತದೆ. "ನಾನು" ಎಂಬುದು ವಿಷಯವನ್ನು ಬಹಳ ವೈಯಕ್ತಿಕವಾದದ್ದಾನ್ನಾಗಿ ಮಾಡುತ್ತದೆ.

"Must" (ತಕ್ಕದ್ದು) ಎಂಬ ಪದವನ್ನು ಸೆರೆಮನೆಯ ಅಧಿಕಾರಿಯು ಉಪಯೋಗಿಸಿದ್ದು, ತಾನು ನಡುಗುತ್ತಿರುವ, ಮಧ್ಯ ರಾತ್ರಿಯಲ್ಲಿ ಭಯಗೊಂಡ ಮನುಷ್ಯನು - ರಕ್ಷಣೆಗಾಗಿ ಶಿಫಾರಸುಗಳನ್ನು ಇಲ್ಲವೇ ತನಗೆ ತೆರೆದಿರುವ ಬೇರೆ ಮಾರ್ಗವನ್ನು ಕೇಳಲು ಬಯಸುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಅವಶ್ಯವಾದದ್ದನ್ನು ಮಾತ್ರವೇ "ತಕ್ಕದ್ದು" ಎಂಬ ಯಾದಿಯಲ್ಲಿ ಇರುವಂಥ ವಿಷಯಗಳನ್ನು ಮಾತ್ರವೇ ಕೇಳಲು ಅವನು ಬಯಸಿದನು. "ಏನು" ಎಂಬ ಪದದ ಅವನ ಉಪಯೋಗವು "ತಕ್ಕದ್ದು" ಎಂಬ ಅನ್ವಯದ ಮುಂದರಿಕೆಯಾಗಿದೆ: "ವಿವರಣೆಗಳನ್ನು, ಸ್ಪಷ್ಟವಾಗಿ ಹೇಳಿದ, - ಒಂದು, ಎರಡು, ಮೂರು ಎಂದು ಪಟ್ಟಿಮಾಡಿದ, - ಅಗತ್ಯವಾದ ಸಂಗತಿಗಳನ್ನು ನನಗೆ ಕೊಡಿರಿ" ಎಂದು ಅವನು ಹೇಳುತ್ತಿದ್ದನು. ಸಾಮಾನ್ಯವಾದ ಹೇಳಿಕೆಗಳನ್ನು ಅವನು ಬಯಸಲಿಲ್ಲ: ಪ್ರಸಂಗಿಗಳು ನಿರ್ದಿಷ್ಟವಾದ ವಿಷಯಕ್ಕೆ ಬರಬೇಕೆಂದು ಅವನು ಬಯಸಿದನು. ಎಲ್ಲಕ್ಕಿಂತಲೂ ಹೆಚ್ಚಾಗಿ ಅವನು ಎಂಥ ಬುದ್ಧಿವಂತ ಪ್ರಶ್ನೆಯನ್ನು ಕೇಳುತ್ತಿದ್ದಾನೆ! ಪ್ರತಿಯೊಂದು ಪದವೂ ಮಹತ್ವದ್ದಾಗಿತ್ತು.

ಪ್ರಸಂಗಿಗಳ ನೇರವಾದ ಮತ್ತು ಸ್ಪಷ್ಟವಾದ ಉತ್ತರವು "ಕರ್ತನಾದ ಯೇಸುವಿನಲ್ಲಿ ನಂಬಿಕೆಯಿಡು" ಎಂಬುದಾಗಿತ್ತು. ಪ್ರಸಂಗಿ ಪ್ರಾರಂಭವಾಗುವ ಮೊದಲು, ನಿಜವಾಗಿಯೂ ಸಂಪೂರ್ಣ ವಿಷಯವನ್ನೊಳಗೊಂಡು, ಇದನ್ನು ಅವರು ಸಂಕ್ಷೇಪವಾಗಿ ಹೇಳಿದ್ದರು (ಅಪೊಸ್ತಲರ ಕೃತ್ಯಗಳು 16:32). ಐದು ಪದಗಳಲ್ಲಿ ಅವರು ಹೇಳಿದ್ದು, ಮುಂದೆ ಬರುವಂಥದ್ದರ ಸಂಕ್ಷಿಪ್ತ ನಿರೂಪಣೆಯಾಗಿತ್ತು. "ಯೇಸು"ವಿನ ಹೆಸರನ್ನು ಹಾಗೆಯೇ ನಿಜವಾದ ದೇವರ ಹೆಸರನ್ನೂ ಸಹ ಅವನು ಎಂದೂ ಕೇಳದೇ ಇದ್ದಿರಬಹುದು. ಉತ್ತರವು ಅವನನ್ನು ಚಕಿತಗೊಳಿಸಿದ್ದಿರಬೇಕು ಮತ್ತು "ಕರ್ತನಾದ ಯೇಸು ಯಾರು?" ಎಂದು ಅವನು ಯೋಚಿಸುವಂತೆ ಮಾಡಿರಬೇಕು. ಅದರ ಪರಿಣಾಮವಾಗಿ, ಕೂಡಲೇ ಸಂಪೂರ್ಣವಾದ ಮತ್ತು ವಿವರವಾದ "ಕರ್ತನ ವಾಕ್ಯವು," ಸೆರೆಮನೆಯ ಅಧಿಕಾರಿಯು ಕೇಳಿದ್ದಕ್ಕೆ ವಿವರಣೆಗಳನ್ನೊಳಗೊಂಡದ್ದು ಹಿಂಬಾಲಿಸಿತು.

ರಕ್ಷಣೆಯು ಕ್ರಿಸ್ತನಿಂದ ಮಾತ್ರವೇ ಪರಿಣಾಮಗೊಳ್ಳುತ್ತದೆಂದು ಕೆಲವರು ತಿಳಿದುಕೊಳ್ಳುತ್ತಾರೆ (ಯೋಹಾನ 14:6; ಅಪೊಸ್ತಲರ ಕೃತ್ಯಗಳು 4:12), ಪಾಪಿಗೆ ಅಗತ್ಯವಾಗಿರುವ "ಎಲ್ಲವೂ" ಆತನಾಗಿದ್ದಾನೆ (ಕೊಲೊಸ್ಸೆ 3:11; ನೋಡಿರಿ 1 ಕೊರಿಂಥ 1:30), ಆತನಲ್ಲಿ ಒಬ್ಬನು "ಸಂಪೂರ್ಣವಾಗಿ" ಮಾಡಲ್ಪಡುತ್ತಾನೆ (ಕೊಲೊಸ್ಸೆ 2:10). "ಕರ್ತನಾದ ಯೇಸುವಿನಲ್ಲಿ ನಂಬಿಕೆಯಿಡು" ಎಂಬ ಆಜ್ಞೆಯು ಏನನ್ನೂ ಬಿಟ್ಟುಬಿಡುವದಿಲ್ಲ ಎಂದು ಅವರು ಹೇಳುತ್ತಾರೆ, ಯಾಕಂದರೆ ಕ್ರೈಸ್ತನಾಗಲಿಕ್ಕೆ ಅಗತ್ಯವಿರುವ ಪ್ರತಿಯೊಂದನ್ನೂ ಆಜ್ಞೆಯು ಒಳಗೊಂಡಿರುತ್ತದೆ. ಹಾಗಿದ್ದರೂ, ಒಬ್ಬನು ಸ್ಪಂಜಿನಿಂದ ನೀರನ್ನು ಹಿಂಡುವಂತೆ "ನಂಬು" ಎಂಬ ಮಾತನ್ನು ಹಿಂಡಲಾಗದು. ಅಂಥ ವಿಧಾನವು "ನಂಬಿಕೆ ಮಾತ್ರವೇ" ಎಂಬ ಮಾತನ್ನು ಬಿಡುವುದು ಎಂಬುದನ್ನು ಕಲ್ಪಿಸುವುದು ಅಪೊಸ್ತಲರ ಕೃತ್ಯಗಳು 16:31ರ ಪ್ರೇರಿತ ಪ್ರಸಂಗಿಗಳನ್ನು ಮತ್ತು ಹೊಸ ಒಡಂಬಡಿಕೆಯನ್ನು ತಪ್ಪಾಗಿ ಪ್ರತಿನಿಧಿಕರಿಸುವುದಾಗಿದೆ. "ನಂಬಿಕೆ ಮಾತ್ರವೇ" ಯಾರನ್ನಾದರೂ ರಕ್ಷಿಸಲಾರದು (ಯಾಕೋಬ 2:19, 24; ನೋಡಿರಿ ಯೋಹಾನ 12:42).

ಒಂದು ಸಾವಿರ ಶ್ರೋತೃಗಳ ಎದರಿನಲ್ಲಿಯ ಒಂದು ಧಾರ್ಮಿಕ ಚರ್ಚೆಯಲ್ಲಿ, ಒಬ್ಬ, "ನಂಬಿಕೆ ಮಾತ್ರ" ಪ್ರಸಂಗಿಯು, "ನಂಬಿರಿ ... ಮತ್ತು ನೀವು ರಕ್ಷಿಸಲ್ಪಡುವಿರಿ"

ಎಂದು ಉಲ್ಲೇಖಿಸಿ, "ಅದರಲ್ಲಿ ಒಂದು ಹನಿ ನೀರು ಇರಲಿಲ್ಲ, ಅದರಲ್ಲಿ ಒಂದು ನೀರು ಹನಿ ಇರಲಿಲ್ಲ" ಎಂದು ಹಾಡಲು ಪ್ರಾರಂಭಿಸಿದನು. ಹೀಗೆ ಅವನು ಬಾಪ್ತಿಸ್ಮವನ್ನು ಪರಿಹಾಸ್ಯಮಾಡಲು ಪ್ರಯತ್ನಿಸಿದನು, ಅವನ ವಿರೋಧಿಯು, "ಮಾನಸಾಂತರದ ಬಗ್ಗೆ ಅದರಲ್ಲಿ ಒಂದೇ ಪದವಿರಲಿಲ್ಲ, ಮಾನಸಾಂತರದ ಬಗ್ಗೆ ಅದರಲ್ಲಿ ಒಂದೇ ಪದವಿರಲಿಲ್ಲ" ಎಂದು ಹಾಡುತ್ತಾ ಅವನ ಹುಚ್ಚುತನವನ್ನು ತೋರಿಸಿದನು. "ನಂಬಿಕೆ ಮಾತ್ರವೇ" ಪ್ರಸಂಗಿಯ ತರ್ಕದಂತೆ ಒಬ್ಬನು ಮಾನಸಾಂತರವಿಲ್ಲದೇ ರಕ್ಷಿಸಲ್ಪಡಬಹುದು. "ನಂಬಿಕೆ ಮಾತ್ರವೇ" ಪ್ರಸಂಗಿಯು ನಿಜವಾಗಿಯೂ ಮಾನಸಾಂತರವು ಅಗತ್ಯವಾಗಿದೆಯೆಂದು ಪ್ರಸಂಗಿಸಿದ್ದರಿಂದ, ಅವನು ಎಷ್ಟು ಸ್ಥಿರತೆಯಿಲ್ಲದವನಾಗಿದ್ದಾನೆ ಮತ್ತು ಬಾಪ್ತಿಸ್ಮಕ್ಕೆ ವಿರುದ್ಧವಾಗಿ ಪ್ರತಿರೋಧವುಳ್ಳವನಾಗಿದ್ದಾನೆ ಎಂಬುದನ್ನು ಶ್ರೋತೃಗಳು ಕಂಡುಕೊಳ್ಳುವರು.

ಅಪೊಸ್ತಲರ ಕೃತ್ಯಗಳಲ್ಲಿ ಪ್ರೇರೇಪಿತ ಪ್ರಸಂಗಿಗಳು, "ಕರ್ತನ ವಾಕ್ಯವನ್ನು" ಸೆರೆಮನೆ ಅಧಿಕಾರಿಗೂ ಅವನ ಕುಟುಂಬದವರಿಗೂ ವಿವರವಾಗಿ ಹೇಳುತ್ತ, ಯೇಸುವಿನಲ್ಲಿ ವಿಶ್ವಾಸವನ್ನು ಮಾತ್ರವಲ್ಲದೇ ಮಾನಸಾಂತರ ಮತ್ತು ಬಾಪ್ತಿಸ್ಮವನ್ನೂ ಸಹ ಬೋಧಿಸಿದರು. ಅದಲ್ಲದೇ, ವಾಕ್ಯಭಾಗವು ಅವನ ಮಧ್ಯರಾತ್ರಿಯ ಬಾಪ್ತಿಸ್ಮದ ಬಗ್ಗೆ ಹೇಳುತ್ತದೆ. ಎಲ್ಲವನ್ನೂ ನೋಡಿದ ತರುವಾಯ, "ಕರ್ತನಾದ ಯೇಸುವಿನಲ್ಲಿ ನಂಬಿಕೆಯಿಡು" ಎಂಬ ಮೊದಲಿನ ಸಂಕ್ಷಿಪ್ತ ಉತ್ತರಕ್ಕೆ ಹಿಂದಿರುಗಿ ಹೋಗಬಹುದು ಮತ್ತು *"ನಂಬು" ಎಂಬ ಪದವು ಎಲ್ಲವನ್ನೂ ಒಳಗೊಂಡ ಪದವಾಗಿ, ಒಟ್ಟು ಪದವಾಗಿ, ಕಡಿಮೆ ಪಕ್ಷ, ನಂಬಿಕೆ, ಮಾನಸಾಂತರ ಮತ್ತು ಬಾಪ್ತಿಸ್ಮ ಎಂಬ ಮೂರು ಅಂಶಗಳನ್ನು ಒಳಗೊಂಡದ್ದಾಗಿ ಉಪಯೋಗಿಸಲ್ಪಟ್ಟಿರುವದನ್ನು ನೋಡುತ್ತೇವೆ.*[1] "ನಂಬಿಕೆಯಿಡು" ಎಂಬ ಸರಳ ಆಜ್ಞೆಯಿಂದ ಪ್ರಸಂಗಿಗಳ ಅರ್ಥ ಏನಾಗಿತ್ತು ಎಂಬುದನ್ನು ಅರ್ಥಮಾಡಿಕೊಳ್ಳುವಾಗ, ಅವರು ಒಂದೇ ಪದದಲ್ಲಿ ಎಲ್ಲವನ್ನೂ ಹೇಳಿದರೆಂದು ಅರ್ಥಮಾಡಿಕೊಳ್ಳುತ್ತಾರೆ.

ಬಾಪ್ತಿಸ್ಮಕ್ಕಾಗಿ ಚಿಮುಕಿಸುವಿಕೆಯನ್ನು ಸಮರ್ಥಿಸುವವರು ಕೆಲವು ಸಲ ಸೆರೆಮನೆಯ ಅಧಿಕಾರಿಯು ಸೆರೆಮನೆಯಲ್ಲಿ ಬಾಪ್ತಿಸ್ಮ ಹೊಂದಿದನೆಂದು ಒಪ್ಪಿಕೊಳ್ಳುತ್ತಾರೆ. ಅದರಿಂದ ಮುಳುಗೇಳಿಸುವಿಕೆಯ ಸಾಧ್ಯತೆಯಿರುವದಿಲ್ಲ. ಹಾಗಿದ್ದರೂ, ಪರ್ತ್ಯಕ್ಕನುಗುಣವಾಗಿ, ಸೆರೆಮನೆಯ ಬಾಪ್ತಿಸ್ಮವಿರುವದಿಲ್ಲ; ಯಾಕಂದರೆ ಪ್ರಸಂಗಿಗಳು "ಹೊರಗೆ" ತರಲ್ಪಟ್ಟರು (16:30). ಪ್ರಸಂಗವು ಪ್ರಸಂಗಿಸಲ್ಪಟ್ಟಿತು, ಬಾಪ್ತಿಸ್ಮಗಳು ನಡಿಸಲ್ಪಟ್ಟವು, ಮತ್ತು ಆಗ ಪ್ರಸಂಗಿಗಳು ಸೆರೆಮನೆಯ ಅಧಿಕಾರಿಯ "ಮನೆಯೊಳಗೆ" ತರಲ್ಪಟ್ಟರು (16:34). ಸೆರೆಮನೆಯ ಮತ್ತು ಸೆರೆಮನೆಯ ಅಧಿಕಾರಿಯ ಮನೆಯ ಮಧ್ಯದಲ್ಲಿ ಎಲ್ಲಿಯೋ ಬಾಪ್ತಿಸ್ಮವಾಯಿತು; ಚಿಮುಕಿಸುವಿಕೆಯನ್ನು ತೋರಿಸುವ ಯಾವುದನ್ನೂ ಇದು ಸೂಚಿಸುವದಿಲ್ಲ.

"ನಾವು ಮುಳುಗೇಳಿಸುವಿಕೆಯಿಂದ ಬಾಪ್ತಿಸ್ಮ ಮಾಡಿಸುತ್ತೇವೆ" ಮತ್ತು ಅದರಿಂದ ಸತ್ಯವನ್ನು ಸಂಧಾನಗೊಳಿಸುತ್ತೇವೆ ಎಂದು ಇಂದು ಯಾರಾದರೂ ಹೇಳಬಹುದು. "ಮೇಲ್ಲುವಿಕೆಯಿಂದ ಮೆಲ್ಲುತ್ತೇವೆ" ಇಲ್ಲವೇ "ಮುದ್ದಿಸುವದರಿಂದ ಮುದ್ದಿಡುತ್ತೇವೆ" ಎಂದೂ ಒಬ್ಬನು ಹೇಳಬಹುದು. ಮುಳುಗೇಳುವದರಿಂದ ಹೆಚ್ಚಾಗಿ ಬಾಪ್ತಿಸ್ಮ ಮಾಡಿಸಲಿಕ್ಕೆ ಬೇರೆ ಯಾವ ಮಾರ್ಗವಿಲ್ಲ. "ನಾವು ಮುಳುಗೇಳಿಸುವಿಕೆಯಿಂದ ಬಾಪ್ತಿಸ್ಮ ಮಾಡಿಸುತ್ತೇವೆ" ಎಂದು ಹೇಳುವುದು, ಬಾಪ್ತಿಸ್ಮ ಮಾಡಿಸುವದಕ್ಕೆ ಒಂದಕ್ಕಿಂತ ಹೆಚ್ಚು ಮಾರ್ಗವಿದೆ ಎಂಬುದನ್ನು ಅನ್ವಯಿಸುತ್ತದೆ.

ಕೆಲವರು ಬಾಪ್ತಿಸ್ಮದ "ವಿಧಾನವನ್ನು" ಕುರಿತು ಮಾತಾಡುತ್ತಾರೆ, ಬೈಬಲಿನಲ್ಲಿ ಯಾವ ವಿಧಾನವೂ ಕೊಡಲ್ಪಟ್ಟಿರುವದಿಲ್ಲ. ಹಾಸ್ಯವಾಗಿರಲು, ಒಬ್ಬನು ಅಪೊಸ್ತಲರ

ಕೃತ್ಯಗಳು 16:33ರಲ್ಲಿಯ "ನೇರವಾಗಿ" ಎಂಬುದನ್ನು ಉಪಯೋಗಿಸುವದರಿಂದ (ಕಿಂಗ್ ಜೇಮ್ಸ್ ಆವೃತ್ತಿಯಿಂದ) "ನೆಟ್ಟಗೆ" ನಿಂತಿರುವ ವಿಧಾನವೆಂದು "ರುಜುವಾತು" ಪಡಿಸಬಹುದು, ಹಾಗಿದ್ದರೂ ಅಲ್ಲಿ ಅರ್ಥವು "ಕೂಡಲೇ" ಎಂದಿರುವುದು; ನೀರಿನಲ್ಲಿ ದೇಹವು ಯಾವ ರೀತಿಯಲ್ಲಿ ಇಡಲ್ಪಟ್ಟಿತು ಎಂಬುದನ್ನು ವಚನವು ಹೇಳುವದಿಲ್ಲ. ವಿವಿಧ ವಿಧಾನಗಳು (ಹಿಂದಕ್ಕೆ, ಮುಂದಕ್ಕೆ, ನೇರವಾಗಿ ಕೆಳಕ್ಕೆ) ಬಾಪ್ತಿಸ್ಮದಲ್ಲಿ ಉಪಯೋಗಿಸಲ್ಪಟ್ಟಿರಬಹುದು, ಆದರೆ ಯಾವುದೂ ಸ್ಪಷ್ಟವಾಗಿ ಹೇಳಲ್ಪಟ್ಟಿರುವದಿಲ್ಲ. ಯಾವ ವಿಧಾನವನ್ನು ಉಪಯೋಗಿಸಬೇಕು ಎಂದು ದೇವರು ಯಾವುದೇ ಕಾನೂನು ಮಾಡಿರುವದಿಲ್ಲ; ಅದು ಬಾಪ್ತಿಸ್ಮ ಆಗಬೇಕೆಂದು - ಮುಳುಗೇಳಿಸುವುದು ಎಂದು ನೇಮಿಸಿದ್ದಾನೆ.

ಚಿಮುಕಿಸುವವರು ಕೆಲವು ಸಲ ಸೆರೆಮನೆಯ ಅಧಿಕಾರಿಯ ಕುಟುಂಬವು ಬಾಪ್ತಿಸ್ಮ ಹೊಂದಿದ್ದನ್ನು ತೆಗೆದು ಕೊಂಡು ಕೆಲವು ಶಿಶುಗಳು ಇದ್ದಿರ ಬಹುದೆಂದು ಹೇಳು ತ್ತಾರೆ. ಹಾಗಿದ್ದರೂ ಅವನ ಕುಟುಂಬದವರೆಲ್ಲರೂ ಪ್ರಸಂಗವನ್ನು ಕೇಳಿಸಿಕೊಳ್ಳುವಷ್ಟು ದೊಡ್ಡವರಾಗಿದ್ದರು (16:32) ಮತ್ತು ಬಾಪ್ತಿಸ್ಮ ಹೊಂದಿದ ತರುವಾಯ ಉಲ್ಲಾಸ ಪಡಲು ಶಕ್ತರಾಗಿದ್ದರು (16:34) ಎಂಬುದನ್ನು ಪಠ್ಯವು ತೋರಿಸುತ್ತದೆ. ಮೂಲ ಪಾಠವನ್ನು ಪರೀಕ್ಷಿಸಿದನಂತರ, ಈ ವೃತ್ತಾಂತವು ಶಿಶುಗಳ ಬಾಪ್ತಿಸ್ಮವನ್ನು ಒಳಗೊಂಡಿರಲಿಲ್ಲ ವೆಂದು ನಿರ್ಧರಿಸಬೇಕಾಗುತ್ತದೆ.

ಸೆರೆಮನೆಯ ಅಧಿಕಾರಿಯ ಮಾರ್ಪಡುವಿಕೆಯ ವೃತ್ತಾಂತವು ಬಾಪ್ತಿಸ್ಮದ ಬಗ್ಗೆ ಬೇರೆ ಎರಡು ದೊಡ್ಡ ಸಂಗತಿಗಳನ್ನು ಹೇಳುತ್ತದೆ. ಮೊದಲನೆಯದು, ಬಾಪ್ತಿಸ್ಮದ ಕಾರ್ಯ ಆಗುವವರೆಗೆ ಧೈರ್ಯಹೀನತೆಯೂ ಕುತೂಹಲವೂ ಇತ್ತು, ಆಗ ಮಾತ್ರವೇ ಸೆರೆಮನೆಯ ಅಧಿಕಾರಿಯೂ ಅವನ ಕುಟುಂಬವೂ ಆನಂದಪಟ್ಟುಕೊಂಡು ಮಧ್ಯರಾತ್ರಿಯ ಭೋಜನ ಮಾಡಿದರು. ಯೇಸುವಿನಲ್ಲಿ ಯಾವುದೇ ಪಾಪಿಯು ವಿಶ್ವಾಸಕ್ಕೆ ಬಂದು, ಅವನು ಬಾಪ್ತಿಸ್ಮ ಹೊಂದುವವರೆಗೆ ಊಟ ಮಾಡಿದನು. ಇಲ್ಲವೇ ಪಾನ ಮಾಡಿದನು ಎಂದು ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಯಾವ ದಾಖಲೆ ಇರುವದಿಲ್ಲ. ಎರಡನೆಯದು, ಬಾಪ್ತಿಸ್ಮವು ತಡಮಾಡಲ್ಪಡದೇ, ಮಧ್ಯರಾತ್ರಿಯಲ್ಲಿಯೇ ಮಾಡಲ್ಪಟ್ಟಿರುವ ದಾಖಲೆಯಲ್ಲಿ ಬಾಪ್ತಿಸ್ಮದ ಮಹತ್ವವು ಸೂಚಿಸಲ್ಪಟ್ಟಿದೆ. ಹೊಸ ಒಡಂಬಡಿಕೆಯ ಪ್ರಸಂಗಿಸುವಿಕೆಯಲ್ಲಿ, ಆಜ್ಞೆಯ ಅವಸರವನ್ನು ತೋರಿಸುತ್ತದೆ. ಕೆಲವೊಂದು ವಿಶೇಷ ಸಮಯದ ವರೆಗೆ ಇಲ್ಲವೇ ಪ್ರಾತಃಕಾಲದ ಬೆಳಗಿನ ವರೆಗೆ ಬಾಪ್ತಿಸ್ಮವನ್ನು ಮುಂದಕ್ಕೆ ಹಾಕುವುದು, ಅಲ್ಲಿಯವರೆಗೆ ರಕ್ಷಣೆಯನ್ನು ಮುಂದೆ ಹಾಕುವದಾಗಿರುತ್ತದೆ.

---

ಟಿಪ್ಪಣಿ

[1]ಇದು ಅಪೊಸ್ತಲರ ಕೃತ್ಯಗಳು 16:31ರಲ್ಲಿ ಅನ್ವಯವಾಗುತ್ತದೆ, ಆದರೆ "ನಂಬು" ಎಂಬ ಪದ ಕಂಡುಬರುವ ಎಲ್ಲಾ ಪರಿಶುದ್ಧ ಬರಹಗಳಲ್ಲಿ ಅಲ್ಲ, ಉದಾಹರಣೆಗಾಗಿ, ಯಾಕೋಬ 2:19, "ದೆವ್ವಗಳೂ ಸಹ ನಂಬುತ್ತವೆ ಮತ್ತು ನಡುಗುತ್ತವೆ" ಎಂದು ಹೇಳುತ್ತದೆ; ಆದರೆ ದೆವ್ವಗಳ ನಂಬಿಕೆಯು ದೇವರಿಗೆ ವಿಧೇಯತೆಯ ಯಾವದೇ ವಿಧಾನವನ್ನು ಒಳಗೊಂಡಿರುವದಿಲ್ಲ.

© 2009 Truth for Today